SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 111 | ಮಂಗಳವಾರ 25—12—45 | ಬಿಡಿ ಪ್ರತಿ 3 ಪೈ

ಇಂಗ್ಲೆಂಡು ಇಂಡಿಯಾಕ್ಕೆ ಕೊಡಬೇಕಾಗಿರುವ ಸಾಲ

ಇಂಗ್ಲೆಂಡು 2—3 ತಿಂಗಳವರೆಗೂ ಅಮೇರಿಕಾದ ಸಂಗಡ 'ಸಂಧಾನವಿಟ್ಟು 'ಬೆದರಿಕೆ ಹಾಕಿ ಕಟ್ಟಕಡೆಗೆ 3750 ಮಿಲಿಯ ಪೌಂಡುಗಳ ಸಾಲವನ್ನು ಪಡೆದು ಅಮೇರಿಕಾಕ್ಕೆ ಸ್ವಲ್ಪಮಟ್ಟಿಗೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ವ್ಯಾಪಾರದ ಸಲವತ್ತುಗಳನ್ನು ಕೊಡಲು ಒಪ್ಪಿಕೊಂಡಿತು. ಈಗ ಪಡೆದುಕೊಂಡಿರುವ ಸಾಲದಿಂದ ಇಂಡಿಯಾ, ಈಜಿಪ್ಟ್ ವಗ್ತು ಇರಾಕ್ ಮುಂತಾದ ಸ್ಟರ್ಲಿಂಗ್ ಬ್ಲಾಕಿನ ದೇಶಗಳ ಸಾಲವನ್ನು ತೀರಿಸಬೇಕಾಗಿತ್ತು. ಆದರೆ ಕೊಟ್ಟಿರುವ ಸಾಲ ತಿರುಗಿ ಕೊಟ್ಟರೆ ಸಾಕಪ್ಪಾ, ಉಳಿದ ತೊಂದರೆಯನ್ನು ಇಂಗ್ಲೆಂಡು ಈಗ ಸ್ವೀಕರಿಸಿದೆ. ಇಂಗ್ಲೆಂಡು ಈ ದೇಶಗಳಲ್ಲಿ ಮುಂದೊಂದರೆ ಸಂಗಡ ಒಪ್ಪಂದ ಮಾಡಿಕೊಳ್ಳಲಿರುವುದಂತೆ. ಈ ಸಾಲವು ಯುದ್ಧ ಕಾಲದಲ್ಲಿ ಮಾಡಲ್ಪಟ್ಟ ಸಾಲವಂತೆ. ಯುದ್ಧದಲ್ಲಿ ಈ ದೇಶಗಳೆಲ್ಲ ರಕ್ಷಣೆ ಮಾಡಿತಂತೆ. ಅದುದರಿಂದ ಈ ದೇಶಗಳು ಇಂಗ್ಲೆಂಡಿಗೆ ಕೃತಜ್ಞತೆ ತೋರಿಸಲಿಕ್ಕೆ ಈ ಸಾಲವನ್ನು ಕಡಿಮೆ ಮಾಡಬೇಕಂತೆ. ಎಷ್ಟು ಎಂಬುದು ಸಂಧಾನದಲ್ಲಿ ತಿಳಿಯಬರುವುದು. ಮಿಕ್ಕ ಸಾಲವನ್ನು ಇಂತಿಷ್ಟು ವರ್ಷಗಳಲ್ಲಿ (ಎಷ್ಟು ವರ್ಷಗಳು ಎಂಬುದು ತಿಳಿದು ಬಂದಿಲ್ಲ. ಮೂಲವನ್ನು ಕೊಂಡು ಅಗಲಿ ಅಥವಾ ಅತಿ ಮುಖ್ಯ ಮೂಲನ್ನು ಅಮೇರಿಕಾದಿಂದ ಕೊಳ್ಳುವುದಾದರೆ ಅದಕ್ಕೆ ಹುಂಡಿ ಕೊಡಲಾಗುವುದಂತೆ ಅದರೆ ಹಿಂದೂ ದೇಶವು ಬಡ ದೇಶವು. ಇಲ್ಲಿ ನೂರಕ್ಕೆ 89 ಜನರು ಎರಡೊಪ್ಪತ್ತಿನ ಊಟವನ್ನು ಕಾಣುವಂತಿಲ್ಲ. ಈ 1400 ಕೋಟಿ ರೂಪಾಯಿಗಳನ್ನು 5 ಲಕ್ಷ ಜನರನ್ನು ಉಪವಾಸದಿಂದ ಹತಮಾಡಿ ಇಂಗ್ಲೆಂಡಿಗೆ ಕೊಡಲ್ಪಟ್ಟಿದೆ. ಬ್ರಿಟಿಷ್ ಸಾಮ್ರಾಜ್ಯದ ಸೈನಿಕರು ಯುದ್ಧದಲ್ಲಿ ಹತರಾದ ಸಂಖ್ಯೆಗಿಂತಲೂ 3 ರಷ್ಟು ಹೆಚ್ಚು ಮಂದಿ ಇಂಗ್ಲೆಂಡಿಗೆ ಸಾಮಗ್ರಿಗಳನ್ನೊದಗಿಸಲು ಪ್ರಾಣ ತೆತ್ತಿರುವರು. ಅಲ್ಲದೆ ಇಂಡಿಯಾವು ಪ್ರತಿವರ್ಷ ಹೋಂ ಚಾರ್ಜ್, ನಿವೃತ್ತ ಅಧಿಕಾರಿಗಳ ಪೆನ್ಷನ್ ಇಂಡಿಯಾದಲ್ಲಿ ಇಂಗ್ಲೆಂಡು ಹಾಕಿರುವ ಬಂಡವಾಳಕ್ಕೆ ಬಡ್ಡಿ ಮೇಲು ಲಾಭದ ರೂಪವಾಗಿ ಮಹಮದ್ ಘಜನಿಯು 17 ಸಾರಿ ಕೊಳ್ಳೆಹೊಡೆದುಕೊಂಡಷ್ಟನ್ನು ಅಥವಾ ಅದಕ್ಕಿಂತಲೂ ಹೆಚ್ಚಿನ ಹಣವನ್ನು ಇಂಡಿಯಾವು ಇಂಗ್ಲೆಂಡಿಗೆ ತೆರಬೇಕಾಗುವುದು. ಇದರಲ್ಲಿ ಒಂದು ಪೈ ಕೂಡ ಕಡಮೆಯಾಗುವಂತಿಲ್ಲ.

ಯುಗೋಸ್ಲೊವಿಯಾ ಸಪ್ರಭುತಕ್ಕೆ ಎರ ಬ್ರಿಟನ್ನಿನ ಅಂಗೀಕಾರವೇ ?

ಮುಂದಿನ ಮಾಹೆ 2 ಅಥವಾ 3 ರಲ್ಲಿ ಬ್ರಿಟಿಷ್ ಪಾರ್ಲಿಮೆಂಟರಿ ನಿಯೋಗ ಭಾರತಕ್ಕೆ ಹೊರಡುವುದು.

ಇದುವರಿಗೆ ಮೈಸೂರು ಸಂಸ್ಥಾನ ಪತ್ರಿಕೋದ್ಯೋಗಿ ಸಮ್ಮೇಳನಾಧ್ಯಕ್ಷತೆಗೆ ಅಲ್‌ಕಲಂ ಸಂಪಾದಕ ಗೌಸ್‌ಮೊಹಿಯುದ್ದೀನ್ ಮತ್ತು ಮಾತೃಭೂಮಿ ಸಂಪಾದಕ ಶ್ರೀಕಂಠಯ್ಯನವರ ಹೆಸರುಗಳನ್ನು ಸೂಚಿಸಲಾಗಿದೆ.

ಫೆಬ್ರವರಿ 16 ರಲ್ಲಿ ಅಲಹಾಬಾದಿನಲ್ಲಿ ಅಖಿಲ ಭಾರತ ವೃತ್ತ ಪತ್ರಿಕಾ ಸಂಪಾದಕರುಗಳ ಸಮ್ಮೇಳನ ಸೇರುವುದು.

ಶ್ರೀ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಚಿತ್ರದುರ್ಗದಲ್ಲಿ ನಡೆದ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನದಲ್ಲಿ ಎರಡು ಮಹದ್ನಿರ್ಣಯಗಳಾದವು: (1) ಟ್ರಿಬ್ಯೂನ್ ಪತ್ರಿಕಾ ಸಂಪಾದಕ ಶ್ರೀ ಕಾಳೇಶ್ವರರಾಯರ ನಿಧನಕ್ಕಾಗಿ ಅನುತಾಪ ಸೂಚನೆ. (2) ಜನ್ಮಭೂಮಿ ಮತ್ತು ಸ್ಟೇಟ್ಸ್‌ಮೀಪಲ್ ಪತ್ರಿಕೆಗಳ ಪ್ರಕಟಣೆಗೆ ಭಾರತ ಸರ್ಕಾರ ಅಪ್ಪಣೆ ಕೊಡದಿದ್ದಕ್ಕಾಗಿ ಖಂಡನೆ.

ಅದರೂ ರಕ್ತ ಸುರಿಸಿ ಕೊಟ್ಟ ಸಾಲವನ್ನು ಇಂಡಿಯಾವು ಈಗ ಕಡಮೆ ಮಾಡಿ ಮಿಕ್ಕದ್ದನ್ನು ಎಷ್ಟೋ ವರ್ಷಗಳಲ್ಲಿ ತೀರಿಸಿಕೊಳ್ಳಬೇಕಂತೆ. ಅದು ಎಂದಿಗೂ ಆಗದ ಮಾತು- ಇಂಡಿಯಾವು ತನಗೆ ಬರಬೇಕಾದ ಸಾಲದಲ್ಲಿ ಒಂದು ಗೈಯನ್ನು ಕೂಡ ಕಡಮೆ ಮಾಡಲು ಇಷ್ಟ ಪಡುವುದಿಲ್ಲ. ಇಂಗ್ಲೆಂಡು ಬೇಕಾದರೆ ಸಾಮ್ರಾಜ್ಯ ಒಲವಿಂದ ಸಾಲವನ್ನು ಮುಟ್ಟಗಿಸಲಿ, ನಂತರ ಅದರ ಫಲವನ್ನು ಉಣ್ಣಲಿ. (ಸ. ಸಂ.)

ಲಂಡನ್ ಡಿ 23— ಯುಗೋಸ್ಲೊವಿಯಾವನ್ನು ಪ್ರಜಾಸ್ವಭುತ್ವವನ್ನಾಗಿ ಮಾಡಿ, ಅರಸರ ಅಡಳಿತವನ್ನು ತೆಗೆದು ಹಾಕುವುದನ್ನು ಬ್ರಿಟಿಷರು ಅನುಮೋದಿಸಿದ್ದಾರೆ.

ಅರೇಬಿಯಾದ ರಾಜ ಇಬ್ನ್‌ಸೈದ್ ಮುಂದಿ ರಾಜ ಇಬ್ನ್ ಸೌದ್ ಮುಂದಿನ ತಿಂಗಳಲ್ಲಿ ಈಜಿಪ್ಟಿಗೆ ಭೇಟಿ ಕೊಡುವಾಗ ಅವನ ಬೇರೆಬೇರೆ ಹೆಂಡತಿಯಂಲ್ಲಿ ಹುಟ್ಟಿರುವ 60 ಮಂದಿ ಮಕ್ಕಳ ಪೈಕಿ 17 ಮಂದಿ ಅವರ ಜೊತೆಯಲ್ಲಿ ಬರುವವರಾಗಿರುವರು ಇದು ಇಲ್ಲಿ ನಡೆಸುವ ಪ್ರತಿನಿಧಿಯ ಎಪ್ಪತ್ತೆಂಟನೆಯ ಅಧಿಕಾರಿಗೆ ತಲೆನೋವನ್ನುಂಟುಮಾಡಿದೆ. ಇವರನ್ನು ಯಾವ ಸ್ಥಾನಗಳಲ್ಲಿ ಕೂರಿಸಬೇಕೆಂದು

ಜೈನಾದವರು ಯು. ಎಸ್. ಆರ್. ಆರ್. ಬಿ. ಯವರನ್ನು 75 ಮಿಲಿಯ ಪೌಂಡು ಬೆಲೆ ಬಾಳುವ 17 ಲಕ್ಷ ಟನ್ ರೈಲ್ವೇ ಸಾಮಗ್ರಿಗಳನ್ನು ಸರಪರಾಜು ಮಾಡಿರೆಂದು ಕೇಳಿರುವರು.

ಬೆಂಗಳೂರು ಡಿ 23— ಮೈಸೂರು ಚೇಂಬರ್ ಆಫ್ ಕಾಮರ್ಸ್ ರಜತ ಮಹೋತ್ಸವ ಸಮಾರಂಭದಲ್ಲಿ ದಿವಾನ್ ಎಸ್. ಮಾಧವರಾಯರು ಅಧ್ಯಕ್ಷತೆ ವಹಿಸಿ, ತಮ್ಮ ಭಾಷಣದಲ್ಲಿ ಈ ಸಂಸ್ಥೆಯ ಕಾರ್ಯಕಲಾಪಗಳನ್ನು ಪ್ರಶಂಸಿಸಿದರು. ಅಲ್ಲದೆ ತಮ್ಮ ಭಾಷಣದಲ್ಲಿ ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ವಿವರಿಸಿ ಕೆಲ ಕಾಲ ರೇಷನ್‌ನಲ್ಲಿ ಸ್ವಲ್ಪ ಕಡಿಮೆ ಮಾಡಬೇಕಾಗಬಹುದೆಂದು ತಿಳಿಸಿದರು.

ಭಾರತ ಮತ್ತು ಇಂಡೋಚೀನಾಗಳಿಂದ ಸೈನ್ಯವನ್ನು ವಾಪಸು ಕರೆಸಿರಿಂದು ಮಾಲ್ಟೋವರು ಬ್ರಿಟಿಷ್ ವಕ್ತು ಅಮೇರಿಕಾಕ್ಕೆ ತಿಳಿಸಿರುವರಂತೆ.

ಅಖಿಲ ಭಾರತ ಆಯುರ್ವೇದ ಸಮ್ಮೇಳನ, ಮಣಿಪಾಲ

ಸಮ್ಮೇಳನಕ್ಕಾಗಿ ವ್ಯವಸ್ಥಾಲಿನಲ್ಲಿ ಎಲ್ಲಾ ಸಿದ್ಧತೆಗಳೂ ನಡೆಯುತ್ತಾ ಇವೆ. ಮಣಿಪಾಲವು ಉಡುಪಿಯ ಹತ್ತಿರ ಎತ್ತರ ಪ್ರದೇಶದಲ್ಲಿದ್ದು ಒಂದೆಡೆ ಮನೋಹರವಾದ ಪಶ್ಚಿಮ ಘಟ್ಟಗಳ ಸಾಲಿನಿಂದಲೂ, ಇನ್ನೊಂದೆಡೆ ವಿಸ್ತಾರವಾದ ಜಲರಾಶಿಯಿಂದ ಕೂಡಿದ ಪಶ್ಚಿಮ ಅರಬ್ಬೀ ಸಮುದ್ರದ ದೃಶ್ಯದಿಂದಲೂ ಹಾಗೂ ಸುಪ್ರಸಿದ್ಧ ದ್ವೈತ ಮತ ಸ್ಥಾಪಕರಾದ ಪೂಜ್ಯ ಶ್ರೀ ಮಧ್ವಾಚಾರ್ಯರ ಜನ್ಮಭೂಮಿಯ ದೃಶ್ಯದಿಂದಲೂ ಕಂಗೊಳಿಸುವ ಭವ್ಯ ಪ್ರದೇಶವಾಗಿದೆ ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳಿಗೆ ವಸತಿಗಾಗಿ ಭಾರಿ ಬಂಗಲೆಗಳನ್ನೇರ್ಪಡಿಸಲಾಗಿದೆ. ವಿಶಾಲವಾದ ಸಭಾಮಂಟಪವೂ ಪಸ್ತು ಪ್ರದರ್ಶನ ಶಾಲೆಯೂ ಅತಿ ಸುಂದರವಾಗಿ ನಿರ್ಮಿತವಾಗಿದೆ. ಕರ್ಣಾಟಕ ಪ್ರಾಂತ್ಯದಲ್ಲಿ ಈ ಸಲ ನಡೆಯುವ ಈ ಮಹಾ ಸಮ್ಮೇಳನವು ಆದರ್ಶಪ್ರಾಯವಾಗುವುದೆಂದು ನಂಬಲಾಗಿದೆ. ಉಡುಪಿಯನ್ನು ಹಾಗೂ ಆಯುರ್ವೇದ ಸಮ್ಮೇಳನವನ್ನು ನೋಡಲು ಕನ್ನಡಿಗರಿಗೆ ಇದೊಂದು ಸುಸಂಧಿಯು.

ಕೆ. ಪಿ. ಪುರಾಣಿಕ್, ಕಾರ್ಯದರ್ಶಿ.

.....

ಕಲಾ ಸಮ್ಮೇಳನ

ರಾಜಧಾನಿಯು ಕಲಾ ಕೂಟದವರು ಮದರಾಸಿನಲ್ಲಿ 28 ನೇ ತಾ || ಕನ್ನಡ ಕಲಾವಿದರ ಸಮ್ಮೇಳನ ಕರೆದಿದ್ದಾರೆ. ಕಲಾಭಿಮಾನಿಗಳು ಸಮ್ಮೇಳನಕ್ಕೆ ಬರಬೇಕೆಂದು ಈ ಮೂಲಕ ಕಲಾಕೂಟದ ಕಾರ್ಯದರ್ಶಿಗಳು ವ್ಯಾರ್ಥಿಸುತ್ತಾರೆ.

.....

ಟೊಳ್ಳು-ಘಟ್ಟಿ ನಾಟಕ

ಬೆಂಗಳೂರು ಆರ್ಯ ವಿದ್ಯಾಶಾಲಾ ಭಾಂದವರು ಮೊನ್ನೆ 'ಶ್ರೀ' ರಂಗಭೂಮಿಯಲ್ಲಿ 'ಟೊಳ್ಳು-ಘಟ್ಟಿ' ನಾಟಕಾಭಿನಯ ಮಾಡಿದರು. ಆ ನಾಟಕವನ್ನು ಮೈಸೂರಿನ ಪತ್ರಿಕೋದ್ಯೋಗಿ ಶ್ರೀ ಎಸ್ ಶ್ರೀಕಂಠಯ್ಯನವರು ನಿರ್ದೇಶಿಸಿದರು.

.....

ಕರ್ಣಾಟಕ ಸಂಗೀತದ ಶ್ರೇಷ್ಠತೆ

ಮದರಾಸು ಡಿ 22— ಸಂಗೀತ ವಿದ್ಯಾಲಯದವರು ಏರ್ಪಡಿಸಿರುವ 19 ನೇ ಸಂಗೀತ ಸಮ್ಮೇಳನದಲ್ಲಿ ಸಂಗೀತ ವಿದ್ವಾನ್ ಮಹಾರಾಜಪುರಂ ವಿಶ್ವನಾಥ ಅಯ್ಯರವರು, ತಮ್ಮ ಅಧ್ಯಕ್ಷ ಭಾಷಣದಲ್ಲಿ ಕರ್ಣಾಟಕಸಂಗೀತವೇ ಪ್ರಪಂಚದಲ್ಲಿನ ಎಲ್ಲಾ ವಿಧದ ಸಂಗೀತದಲ್ಲೂ ಶ್ರೇಷ್ಠವಾದುದೆಂದಿರುವರು.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸ್ಕಾರಂಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧವಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಜಿಕಪ್ರಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರ್ತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಕ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

AT Opera— From 20–12–45

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ
ಪಾತ್ರವಹಿಸಿರುವ

ಅಶೋಕ ಕುಮಾರ (ತಮಿಳು)

Morning Shows from 28—12—45

To be or not to be

L. N. Press

Sriramp et MYSORE

For Good Printing

Edited, Printed and published by M. S. Krishna Rao, at the Satvavadi Press, Chamaraja Agrahar, Mysore

2 ನೇ ವಾರ

At Ranjit Sant Tulsi Das

ವಿಷ್ಣುಪಂತ್ ಪಗ್ನೀಸ್, ಲೀಲಾಚಿಟ್ನಿಸ್ ವಾಸಂತಿ ಪಾತ್ರವಹಿಸಿರುವ

ಸಂತ್ ತುಳಸೀ ದಾಸ್



ಅಮೇರಿಕಾ ಸಡೆಗಳು ಕೈನ್ ಪ್ರದೇಶ ದಾಟುತ್ತಿರುವುದು.

CINEMA STARS

Pictorial Calender for 1946. 8 different kinds. Nicely posed. U. S. A. printed. Rs. 2-8-0 with postage.

T, I. T, Post Box 21, Dacca 3

TRUE ART STUDIES

Beautiful Women. Photos from life. Actual photos of living models in different nations in daring position. Cabinet size Rs 15 per doz. Post card size Rs 12 per doz.

FRENCH ART SPECIAL

Every man likes to see. Life-like charmin posed. Love scenes. 200 different post card size. Rs 12 per doz. When ordering please state your age and occupation.

T.I.T. Post Box 21 Dacca

ಹಸಿ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಸ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

Piles ....Dont be cut.... Until you try this wonderful Treatment for Piles PILESPIL A guaranteed herbal extract challenged boon for Piles of all description, without operation. Trial phial Re 1/- Big phial Rs 2-8-0 only. Postage extra. Wanted Agents & stockist everywhere.

T. I. T. Post Box 21
Dacca 3.

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಶ್ರೀ ಕೃಷ್ಣ ಸುಧಾ

ಬೆಲೆ ಡಬ್ಬಿಗೆ ೧ ಕ್ಕೆ ಒಂದು ರೂಪಾಯಿ.

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು